


ಹಳೆ ಬೇರು ಹೊಸ ಚಿಗುರು ಕಂಗೊಳಿಸಿದಂತೆ ಕಾಣುವ 'ಜರ್ಮನ್ ಹಳ್ಳಿ'

# ದಕ್ಷಿಣ ಆಸ್ಟ್ರೇಲಿಯಾದಲ್ಲಿ ಜರ್ಮನ್ ಹಳ್ಳಿ



**ದೇಶದೊಳಗೊಂದು ಪುಟ್ಟ ದೇಶ ರೂಪುಗೊಳ್ಳುವಂತೆ, ಆಸ್ಟ್ರೇಲಿಯಾದಲ್ಲಿ ಹ್ಯಾನ್‌ಡೋರ್ಪ್ ನಗರವಿದೆ. ಈ ಪುಟ್ಟ ಪಟ್ಟಣದಲ್ಲಿ ಓಡಾಡಿದರೆ ಜರ್ಮನಿಯ ಊರೊಂದರಲ್ಲಿ ಸುತ್ತಾಡಿದ ಅನುಭವವಾಗುತ್ತದೆ.**

■ ನಿರಂಜನ ವಾನಳ್ಳಿ

ಎಲ್ಲಿಯ ಆಸ್ಟ್ರೇಲಿಯಾ, ಎಲ್ಲಿಯ ಜರ್ಮನಿ? ಆಸ್ಟ್ರೇಲಿಯಾದ ದಕ್ಷಿಣದಲ್ಲಿ ಅಡಿಲೇಡ್‌ನಿಂದ 28 ಕಿ.ಮೀ. ದೂರದಲ್ಲಿ ಒಂದು ಜರ್ಮನ್ ಹಳ್ಳಿಯಿದೆ ಎಂದರೆ ಅಚ್ಚರಿಯಾಗಬಹುದು. ಅದೊಂದು ಚಾರಿತ್ರಿಕ ಹಳ್ಳಿ. ದೇಶದೇಶಗಳ ಗಡಿ ಮೀರಿ ಮೆರೆಯುವ ಮಾನವೀಯತೆಗೊಂದು ವಿಶಿಷ್ಟ ಉದಾಹರಣೆ. ಇವತ್ತಿಗೂ ಈ ಹಳ್ಳಿ ತನ್ನ ಚಾರಿತ್ರಿಕ ಸ್ಪರ್ಶವನ್ನುಳಿಸಿಕೊಂಡು ಆಧುನಿಕವಾಗಿ ಬೆಳೆದಿದೆ. ಮಾತ್ರವಲ್ಲ, ಅಡಿಲೇಡಿನ ಆಕರ್ಷಣೆಗಳಲ್ಲಿ ಒಂದಾಗಿದೆ ಎಂಬುದು ಮಹತ್ವದ ಸಂಗತಿ. ಇಲ್ಲಿಯೇ ಹುಟ್ಟಿ ಬೆಳೆದ ಯುವಜನತೆ ತಮ್ಮ ಮೂಲ ಬೇರು ಜರ್ಮನಿ ಎಂಬುದನ್ನು ಸದಾ ಎಚ್ಚರಿಕೆಯಿಂದ ಕಾಪಾಡಿಕೊಂಡಿದ್ದಾರೆ, ಆ ಬಗ್ಗೆ ಹೆಮ್ಮೆಪಡುತ್ತಾರೆ ಎಂಬುದು ನಿಜ.

ಅದು 19ನೇ ಶತಮಾನ. ಸರಿಯಾಗಿ ಹೇಳಬೇಕೆಂದರೆ 1838. ಜಾರ್ಜ್ ಅಂಗಾಸ ಎಂಬಾತ ಇಂಗ್ಲೆಂಡಿಗೆ ವಸಾಹತೀಕರಣವನ್ನು ಬೆಳೆಸುವ ಸಲುವಾಗಿ ಪ್ರಯಾಣ ಬೆಳೆಸುತ್ತಾನೆ. ಅಲ್ಲಿ ಪೆಸ್ಟರ್ ಕೇವಲ್ ಎಂಬಾತನನ್ನು ಭೇಟಿಯಾಗುತ್ತಾನೆ. ಈ ಕೇವಲ್ ಜರ್ಮನಿಯವ. ಜರ್ಮನಿಯ ಲುಥೆರನ್ಸ್‌ಗಳನ್ನು ಪರ್ಷಿಯನ್ ದೊರೆ ಅಮಾನವೀಯವಾಗಿ ಕೊಲೆ ಮಾಡುತ್ತಿದ್ದುದನ್ನು ಅಂಗಾಸನಿಗೆ ಕೇವಲ್ ಅರುಹುತ್ತಾನೆ ಹಾಗೂ ಯಾವುದಾದರೂ ಸುರಕ್ಷಿತ ಪ್ರದೇಶದಲ್ಲಿ ಇವರನ್ನು ಪುನರ್ವಸತಿಗೊಳಿಸುವ ಅಗತ್ಯವನ್ನು ಮನಗಾಣಿಸುತ್ತಾನೆ. ಆಗ ಅಂಗಾಸ ಇವರನ್ನು ದಕ್ಷಿಣ ಆಸ್ಟ್ರೇಲಿಯಾಕ್ಕೆ ಕರೆತರಲು ಆಮಂತ್ರಣ ನೀಡುತ್ತಾನೆ ಮಾತ್ರವಲ್ಲ, ಸಹಾಯಕ್ಕಾಗಿ 8000 ಪೌಂಡು ಹಣ ನೀಡುತ್ತಾನೆ.

ಅಂಗಾಸನ ನೆರವಿನಿಂದ ಸ್ಫೂರ್ತಿಗೊಂಡ ಕೇವಲ್ 28 ಡಿಸೆಂಬರ್ 1838ರಲ್ಲಿ 187 ಜನರ 38 ಕುಟುಂಬಗಳನ್ನು ಝೀಬ್ರಾ ಎಂಬ 344 ಟನ್ ತೂಕದ ಹಡಗಿನಲ್ಲಿ ಜರ್ಮನಿಯಿಂದ ಅಡಿಲೇಡ್ ಬಂದರಿಗೆ ಕರೆತರುತ್ತಾನೆ. ನಂತರ ಮತ್ತೂ 14 ಕುಟುಂಬಗಳು ಸೇರಿಕೊಳ್ಳುತ್ತವೆ. ಹೀಗೆ ಒಟ್ಟು 54 ಜರ್ಮನಿಯ ಕುಟುಂಬಗಳು ಪರ್ಷಿಯನ್ ದೊರೆಯ ದಂಡನೆ ತಪ್ಪಿಸಿಕೊಳ್ಳಲು ದಕ್ಷಿಣ ಆಸ್ಟ್ರೇಲಿಯಾಕ್ಕೆ ಬಂದಿಳಿಯುತ್ತವೆ.

ಅವರಿಗೆ ಮೊದಲಿಗೆ ನೂರು ಎಕರೆ ಜಾಗವನ್ನು ಒಂದು ವರ್ಷಕ್ಕೆ ಗುತ್ತಿಗೆಗೆ ನೀಡಲಾಗುತ್ತದೆ. ಅದರಲ್ಲಿ 19 ಎಕರೆಯಲ್ಲಿ ಅವರು ಮನೆ ಕಟ್ಟಿಕೊಳ್ಳುತ್ತಾರೆ. ನಿಧಾನವಾಗಿ ಕೃಷಿ ಮಾಡಿ ಜಾಗವನ್ನು ಬೆಳೆಸುತ್ತಾರೆ. ಆ ಹಳ್ಳಿಯಲ್ಲಿ ಗಟ್ಟಿಯಾಗುತ್ತಾರೆ. 2400 ವರ್ಷಗಳಿಂದ ಅಲ್ಲಿಯ ಮೂಲನಿವಾಸಿಗಳಾಗಿದ್ದ ಪೆರಾಮಂಕ್ ಸಮುದಾಯದವರು ನಿಧಾನವಾಗಿ ಕಾಲ್ತೆಗೆಯುತ್ತಾರೆ. ಜರ್ಮನೀಯರ ಸಂಪರ್ಕಕ್ಕೆ ಬಂದು ಹೊಸ ತಲೆಮಾರು ಸೃಷ್ಟಿಯಾಗುತ್ತದೆ.

ಕಠಿಣ ದುಡಿಮೆ ಮಾಡುವ ಜರ್ಮನೀಯರು ನೂರು ವರ್ಷದಲ್ಲಿ ಹ್ಯಾನ್‌ಡೋರ್ಪ್ ಹಳ್ಳಿಯನ್ನು